ಅಂತಲೂ ಅಲ್ಲ. ಒಟ್ರಾಶಿ ಅವರು ಹೇಳಿದ್ದನ್ನು ಇವರು ಚಾಚೂ ತಪ್ಪದೆ ನಡೆಸಿದರು. ನಾಯಿ ಕಟ್ಟಿ ಹಾಕಿದರು. ಒಳಗೆ ಬಂದವರನ್ನು ಜಗುಲಿಯ ಮೇಲೆ ಕೂರಿಸಿ ಅವರ ದೇವರಿಗೆ ಪೂಜೆ ಮಾಡಿದರು. ಅವರು ಹೇಳಿದಂತೆ ಪ್ರಸಾದ ಇಟ್ಟುಕೊಂಡರು. ಮತ್ತೆ ಎಚ್ಚರ ಬಂದಿದ್ದು ತನಿಯ ಮುಖಕ್ಕೆ ತಣ್ಣೀರು ತೋಕಿದಾಗಲೇ... ಹೇಳಿದ್ದನ್ನೇ ಮತ್ತೆ ಮತ್ತೆ ಎಲ್ಲರೆದುರು ಹೇಳಿ ಹೇಳಿ 'ಅದೇ ಸತ್ಯ' ಎಂದು ತಮ್ಮನ್ನು ನಂಬಿಸಿಕೊಳ್ಳುವ ಹಂತ ತಲುಪಿಬಿಟ್ಟಿದ್ದರು ಯಶೋದಮ್ಮ. 'ನಾನೇ ನಾಯಿ ಕಟ್ಟಿ ಹಾಕಿದೆ. ನಾನೇ ಉಣುಗೋಲು ತೆಗೆದೆ. ನಾನೇ ಅವರನ್ನು ಜಗುಲಿಯಲ್ಲಿ ಕೂರಿಸಿ ಅವರ ದೇವರಿಗೆ ಪೂಜೆ ಮಾಡಿದೆ...' ಎಂದು ಸತ್ಯಹರಿಶ್ಚಂದ್ರನನ್ನು ಮೈಮೇಲೆ ಆವಾಹಿಸಿಕೊಂಡರೆ ಗತಿ ಅಧೋಗತಿಯಾಗುತ್ತದೆ ಎಂದು ಅವರಿಗೆ ಗೊತ್ತುಂಟು. 'ಇದೆಂತಾ ದಡ್ಡ ಹೆಂಗಸು' ಎಂದು ಮನೆಯವರು ಮಾತ್ರವಲ್ಲ, ಹೊರಗಿನ ಜನರೂ ಜನ್ಮಪೂರ್ತಿ ಹೀನೈಸುವುದನ್ನು ನೆನೆದರೆ ಅವರಿಗೆ ಜೀವ ಹೋದಂತಾಗುತ್ತದೆ. ತನಿಯನ ಶೈತ್ಯೋಪಚಾರದಿಂದ ಪ್ರಜ್ಞೆ ಮರಳಿ ಬಂದು ಮನೆಯಲ್ಲಿ ನಡೆದ ದರೋಡೆ ಕಣ್ಣಿಗೆ ರಾಚುತ್ತಿದ್ದಂತೆ ತಮ್ಮನ್ನು ಸಮರ್ಥಿಸಿಕೊಳ್ಳಲು ಏನು ಹೇಳಬೇಕೆಂದು ಮನಸ್ಸು ನಿಶ್ಚೈಸಿಬಿಟ್ಟಿತ್ತು. ತೀರಾ ಅವಹೇಳನೆಗೆ ತುತ್ತಾಗಬಾರದು. ಸತ್ಯ ಮುಚ್ಚಿಟ್ಟುಕೊಳ್ಳಲೂ ಬಾರದು. ಪ್ರಸಾದ ಇಟ್ಟುಕೊಂಡ ಮೇಲೆ ಅವರಿಗೆ ಪ್ರಜ್ಞೆ ತಪ್ಪಿದ್ದಂತೂ ನಿಜ ತಾನೇ? ಕೊಂಚ ಮೊದಲೇ ಬುದ್ಧಿ ಸ್ವಾಧೀನ ತಪ್ಪಿತೆಂದರೆ ಒಂದಿಷ್ಟಾದರೂ ಮುಖ ಉಳಿಸಿಕೊಳ್ಳಬಹುದು. ಎಂತಾ ಸಂದರ್ಭದಲ್ಲೂ ನಡೆದ ತಪ್ಪನ್ನು ಮೈಮೇಲೆ ಎಳೆದುಕೊಳ್ಳದೆ ನುಣುಚಿಕೊಳ್ಳಲು ದಾರಿ ಹುಡುಕುತ್ತಿರುತ್ತದೆ ಮನಸ್ಸು. ಸಾಧ್ಯವಾದಷ್ಟು ತನ್ನನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತದೆ. ಯಾವತ್ತೂ ಮಗಳೆದುರು ಸುಳ್ಳಾಡದಿದ್ದ ಯಶೋದಮ್ಮ ಆವತ್ತು ಅವಳೆದುರು ಕತೆ ಕಟ್ಟಿದ್ದರು, ಅಲ್ಲಲ್ಲ, ಮೊದಲೇ ಕಟ್ಟಿ ಎಲ್ಲರೆದುರು ಹೇಳಿದ್ದ ಕತೆ ಮತ್ತೆ ಹೇಳಿದ್ದರು.

★★★

ಮನೆಗೊಂದು ಮಗು ಬೇಕೆಂಬ ತೀವ್ರಾಪೇಕ್ಷೆ ಯುಕ್ತಾಯುಕ್ತ ವಿವೇಚನೆಯನ್ನೂ ಮೀರಿ ಬುದ್ಧಿಯನ್ನು ಸ್ವಾಧೀನಪಡಿಸಿಕೊಳ್ಳುವಷ್ಟು ಪ್ರಭಾವಶಾಲಿಯಾಗಿತ್ತೇ? ವಿವೇಕಕ್ಕೆ ಮಂಕು ಕವಿಯುವಷ್ಟು? ಯಾರು ಏನು ಹೇಳಿದರೆ ಅದನ್ನು ಕುರುಡಾಗಿ ನಂಬುವಷ್ಟು? ಯಾವುದೋ ಪವಾಡ ನಡೆದುಬಿಡುತ್ತದೆ ಎಂದುಕೊಳ್ಳುವಷ್ಟು ಹತಾಶಭಾವನೆಯ ಪರಮಾವಧಿ ತಲುಪಿಬಿಟ್ಟಿದ್ದೇನೇ ತಾನು? ಇದೆಂತಾ ದೌರ್ಬಲ್ಯ? ನುಂಗಲಾಗದ, ಉಗುಳಲಾಗದ ಬಿಸಿ ತುಪ್ಪ ಬಾಯಲ್ಲಿಟ್ಟುಕೊಂಡಿದ್ದ ಯಶೋದಮ್ಮ ದಿನ ಕಳೆಯುತ್ತಿದ್ದಂತೆ ನವೆಯುತ್ತಾ ಹೋದರು. 'ಅಮ್ಮಾ, ನಮಗೆ ನೀನು ಮುಖ್ಯ ಕಣೇ. ನೀನಿದ್ದರೆ ಅಷ್ಟೈಶ್ವರ್ಯ ಇದ್ದಂಗೆ. ನೀನೂ ಕೈ ಬಿಟ್ಟು ಹೋಗ್ಬೇಡ' ವೆಂಕಟೇಶನ ಮಾತು ಸಾಂತ್ವನದ ತಂಪಿಗಿಂತಾ ಇರಿವ ಚೂರಿಯಾಗಿ ಅವರನ್ನು ಚುಚ್ಚುತ್ತಿತ್ತು.


## ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರ ಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.